# ಜಮ್ಮು- ಕಾಶ್ಮೀರ ವಿಧಾನ ಪರಿಷತ್ತು ರದ್ದು

ಕ.ಪ್ರ 19/10/19

## 1957ರಿಂದ ಅಸ್ತಿತ್ವದಲ್ಲಿದ್ದ 36 ಸದಸ್ಯರ ಮೇಲ್ಮನೆ ಇನ್ನು ನೆನಪು

**ಜಮ್ಮು:** ಇತ್ತೀಚೆಗಷ್ಟೇ ವಿಶೇಷ ಸ್ಥಾನಮಾನ ಕಳೆದುಕೊಂಡಿದ್ದ ಜಮ್ಮು-ಕಾಶ್ಮೀರ, ಈಗ ವಿಧಾನ ಪರಿಷತ್ತಿನಿಂದಲೂ ವಂಚಿತವಾಗಲಿದೆ. ಕಳೆದ 62 ವರ್ಷಗಳಿಂದ ಇದ್ದ ವಿಧಾನ ಪರಿಷತ್ತನ್ನು ರದ್ದುಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇದೇ ವೇಳೆ, ವಿಧಾನ ಪರಿಷತ್ತಿನಲ್ಲಿ ಕೆಲಸ ಮಾಡುತ್ತಿದ್ದ 116 ಸರ್ಕಾರಿ ಸಿಬ್ಬಂದಿಗೆ ಅಕ್ಟೋಬರ್ 22ರಿಂದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಜಮ್ಮು-ಕಾಶ್ಮೀರವನ್ನು ಆಗಸ್ಟ್ 5ರಂದು ಕೇಂದ್ರ ಸರ್ಕಾರವು 2 ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿ ವಿಶೇಷ ಸ್ಥಾನಮಾನ ರದ್ದುಗೊಳಿಸಿತ್ತು. ಒಂದು ಜಮ್ಮು-ಕಾಶ್ಮೀರವಾದರೆ, ಇನ್ನೊಂದು ಕೇಂದ್ರಾಡಳಿತ ಪ್ರದೇಶ ಲಡಾಖ್. ಈ ಮಾಸಾಂತ್ಯಕ್ಕೆ ಈ ಆದೇಶ ಜಾರಿಗೆ ಬರಲಿದೆ.

ಈ ಪೈಕಿ ಜಮ್ಮು-ಕಾಶ್ಮೀರವು ವಿಧಾನಸಭೆ ಹೊಂದಿದ ಕೇಂದ್ರಾಡಳಿತ ಪ್ರದೇಶವಾಗಲಿದ್ದು, ಇನ್ನು ಮುಂದೆ ವಿಧಾನ ಪರಿಷತ್ತು ಇರುವುದಿಲ್ಲ.

ರಾಜ್ಯದಲ್ಲಿ ವಿಧಾನ ಪರಿಷತ್ತು 1957ರಿಂದ ಜಾರಿಯಲ್ಲಿತ್ತು ಹಾಗೂ 36 ಸದಸ್ಯರನ್ನು ಹೊಂದಿತ್ತು. ಇನ್ನು ವಿಧಾನಸಭೆ 87 ಸ್ಥಾನಗಳನ್ನು ಹೊಂದಿದೆ.